# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD

Malleshwaram, Bengaluru – 560003.

## 2020-21 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 1

**ವಿಷಯ : ತೃತೀಯ ಭಾಷೆ – ಕನ್ನಡ** **ವಿಷಯ ಸಂಕೇತ : 62-K**

**ಅವಧಿ : 3 ಗಂಟೆ** **ಗರಿಷ್ಠ ಅಂಕಗಳು : 80**

**ಶಾಲಾ ಅಭ್ಯರ್ಥಿಗಳಿಗೆ**

---

### ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **8 x 1 = 8**

1. ಕೊಡಗಿನ ಗೌರಮ್ಮನವರು ಬರೆದ ಮೊದಲ ಕತೆ :

   A. ಪುನರ್ವಿವಾಹ

   B. ಸತ್ಯಾಗ್ರಹ

   C. ಹರಿಜನೋದ್ಧಾರ

   D. ಮಂಗಳಸೂತ್ರ

2. ಶರೀಫರು ಮೈಮರೆತು ಹಾಡುತ್ತಿದ್ದ ಹಾಡುಗಳನ್ನು ಬರೆದುಕೊಳ್ಳುತ್ತಿದ್ದವರು.

   A. ಬಸಮ್ಮ

   B. ಕುಂಬಾರ ಮುದಕಪ್ಪ

   C. ಗೋಪಾಲಭಟ್ಟರು

   D. ಫಾತಿಮ

3. ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರಗಳು.

   A. ಪ್ಲುತ

   B. ದೀರ್ಘ

   C. ಹ್ರಸ್ವ

   D. ಯೋಗವಾಹ

4. ಕಟ್ಟಿತೇವ ಪದದ ಗ್ರಾಂಥಿಕ ರೂಪ

   A. ಕಟ್ಟುತ್ತೇವೆ

   B. ಕಟ್ಟುತ್ತೀವಿ

   C. ಕಟ್ಟುತ್ತೀವೆ

   D. ಕಟ್ಟಿದೆವು

5. ಬಣ್ಣ ಪದದ ತತ್ಸಮ ರೂಪ

   A. ವರುಣ

   B. ವರ್ಣ

   C. ವರಣ

   D. ಭರಣ

6. ಹೂವಿನ ಹಾಗೆ ಸುಂದರ – ಇಲ್ಲಿರುವ ಅಲಂಕಾರ :

A. ಉಪಮಾ

B. ರೂಪಕ

C. ಶ್ಲೇಷಾ

D. ದೃಷ್ಟಾಂತ

7. ಮೂರುಸಾಲಿನ ಪದ್ಯವನ್ನು ಹೀಗೆನ್ನುವರು :

A. ದ್ವಿಪದಿ

B. ತ್ರಿಪದಿ

C. ಚೌಪದಿ

D. ಕಂದ

8. ಸಭೆ ಸಮಾರಂಭಗಳಲ್ಲಿ ಮೈಮರೆತು ಕಬ್ಬಿಗರು ಮತ್ತೆ ಮತ್ತೆ ಕಾವ್ಯವಾಚನ ಮಾಡುತ್ತಿದ್ದರು.
ಈ ವಾಕ್ಯದಲ್ಲಿರುವ ದ್ವಿರುಕ್ತಿಪದ :

A. ಸಭೆ ಸಮಾರಂಭ

B. ಮೈಮರೆತು

C. ಮತ್ತೆ ಮತ್ತೆ

D. ಕಾವ್ಯವಾಚನ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x 1 = 4**

9. ಅಕ್ಕಿ : ಬಿಳಿದು : : ರಾಗಿ : ____________

10. ಮಹರ್ಷಿ : ಗುಣಸಂಧಿ : : ಸತ್ಯಾಗ್ರಹ : ____________

11. ನಾನು : ಉತ್ತಮ ಪುರುಷ : : ನೀನು : ____________

12. ಕಂಚುಗಾರರ ಬಿಡಾರದಂದದಿ : ಪ್ರತಿಮೆಯ ನೆರಹಿ : : ನಾಟಕಸ್ತ್ರೀಯಂತೆ : ____________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 4 x 1 = 4**

13. ಶರೀಫರಿಗೆ ಸಹಿಸಲಾಗದ ಆಘಾತವಾಯಿತು ಏಕೆ?

14. ಸತೀಶ ಕುಲಕರ್ಣಿಯವರು ಎಂತಹ ಹಾಡನ್ನು ಕಟ್ಟುತ್ತೇವೆಂದು ಹೇಳಿದ್ದಾರೆ?

15. ವಿಶುವು ಅವಮಾನದಿಂದ ತಲೆತಗ್ಗಿಸಿದ್ದೇಕೆ?

16. ಧರ್ಮಪದನ ಕೈಯಲ್ಲಿದ್ದ ಬುತ್ತಿಯ ತಿನಿಸು ಮಣ್ಣುಪಾಲಯಿತೇಕೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 x 2 = 16**

17. ಗಾಂಧೀಜಿಯವರು ಅವಕ್ಕಾಗಲು ಕಾರಣವೇನು?

18. ಕಿತ್ತೂರುರಾಣಿ ಚೆನ್ನಮ್ಮನ ದೇಶಾಭಿಮಾನವನ್ನು ಕುರಿತು ಬರೆಯಿರಿ.

19. ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡರು?

20. ಕುಲಕರ್ಣಿಯು ರಾಮಸಿಂಗ್‌ನ ಮೇಲೆ ಗುಂಡು ಹಾರಿಸಿದ್ದೇಕೆ?

21. ಅಂತರಂಗ ಮತ್ತು ಬಹಿರಂಗವನ್ನು ಹೇಗೆ ಶುದ್ಧಿಯಾಗಿಡಬೇಕೆಂದು ಬಸವಣ್ಣನವರು ಹೇಳಿದ್ದಾರೆ?

22. ಪುರಂದರದಾಸರು ಡಾಂಭಿಕ ಭಕ್ತನ ಪೂಜೆಯನ್ನು ಹೇಗೆ ವರ್ಣಿಸಿದ್ದಾರೆ?

23. ಸ್ವಾತಿಯ ಮಳೆಸುರಿದಾಗ ರೈತರು ಏಕೆ ಸಂಭ್ರಮಿಸುತ್ತಾರೆ?

24. ಧರ್ಮಪದನು ತನ್ನ ಭಾವನೆಗಳನ್ನು ಏಕೆ ಹತ್ತಿಕ್ಕಿಕೊಂಡನು?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ. 2 x 3 = 6**

25. "ಅಲ್ಲಾಹೂ ಅಕ್ಬರ್"

26. "ಜಗ್ಗಿಸಿ ಹುಯ್ಯೋ ಮಳೆರಾಯ"

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4 x 3 = 12**

27. ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು?

28. ಗೊರೂರರು ಒಂದು ರಾತ್ರಿಯನ್ನು ಲಾಕಪ್ಪಿನಲ್ಲಿ ಕಳೆಯಬೇಕಾಯಿತು ಏಕೆ?

29. 'ಉದರ ವೈರಾಗ್ಯ' ಪದ್ಯದ ಆಶಯವನ್ನು ಏಕೆ ಮೆಚ್ಚುವಿರಿ.

30. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳಾವುವು? ವಿವರಿಸಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪವನ್ನು ಬರೆಯಿರಿ.** **2 x 3 = 6**

31. ಗೊರೂರು ರಾಮಸ್ವಾಮಿ ಅಯ್ಯಂಗಾರ್

32. ಸತೀಶ್ ಕುಲಕರ್ಣಿ

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1 x 3 = 3**

33. ಉಪ್ಪು ತಿಂದವನು ನೀರು ಕುಡಿಯಲೇಬೇಕು.

ಅಥವಾ

ಬೆಳೆಯುವ ಪೈರು ಮೊಳಕೆಯಲ್ಲಿ

**IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 x 4 = 4**

34. ಮಲ್ಲಮಾಜಿಯು ಶಿವಾಜಿಯೇ ರಾಜಿಮಾಡಿಕೊಳ್ಳುವಂತೆ ಮಾಡಿದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಕೆಳದಿ ಚೆನ್ನಮ್ಮನು ಯುದ್ಧವನ್ನೇ ಮಾಡದೆ ಬಲಾಢ್ಯವಾದ ಮೊಗಲರ ಸೈನ್ಯವನ್ನು ಸೋಲಿಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 x 4 = 4**

35. ನಾವು ______________________________

______________________________

______________________________

______________________________ ಇಂದೆ

ಅಥವಾ

ಕರ್ನಾಟಕ ______________________

______________________

______________________

______________________ ಒಂದೆ

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4 x 1 = 4**

ರಾಮ್ ಜಿ ಸತ್ಪಾಲ್ ಮತ್ತು ಭೀಮಾಬಾಯಿ ದಂಪತಿಗಳಿಗೆ ಮಹಾರಾಷ್ಟ್ರದ ಮಹೌ ಎಂಬ ಹಳ್ಳಿಯಲ್ಲಿ ಬಾಬಾಸಾಹೇಬ ಭೀಮರಾವ್ ಅಂಬೇಡ್ಕರ್ ಜನಿಸಿದರು. ಭೀಮನು ಆರುವರ್ಷದವನು ಇರುವಾಗಲೇ ತಾಯಿಯನ್ನು ಕಳೆದುಕೊಂಡನು. ರಾಮ್‌ಜಿಯ ತಂಗಿ ಮೀರಾಬಾಯಿ ಭೀಮನ ಪಾಲನೆ ಪೋಷಣೆ ಮಾಡಿ ಬೆಳೆಸಿದಳು. ಡಾ॥ ಅಂಬೇಡ್ಕರ್ ಅವರು ಭಾರತದ ಸಂವಿಧಾನದ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದರು. ಇದರಲ್ಲಿ ಅಂಬೇಡ್ಕರರ ಅಪೂರ್ವವಾದ ವಿಚಾರ ಕ್ಷಮತೆಯೂ ನವ ಸಮಾಜ ವ್ಯವಸ್ಥೆಯ ನಿರ್ಮಾಣಕ್ಕೆ ಅನುವಾಗುವ ಅಂಶಗಳೂ ಹಾಸು ಹೊಕ್ಕಾಗಿರುವುದನ್ನು ಕಾಣಬಹುದು. ಹಾಗಾಗಿಯೇ ಇವರನ್ನು 'ಭಾರತದ ಸಂವಿಧಾನ ಶಿಲ್ಪಿ' ಎಂದು ಕರೆದಿದ್ದಾರೆ.

**36. ಪ್ರಶ್ನೆಗಳು :**

ಎ) ಅಂಬೇಡ್ಕರ್ ಅವರ ತಂದೆ ತಾಯಿ ಯಾರು?

ಬಿ) ಅಂಬೇಡ್ಕರ್ ಅವರ ಜನ್ಮಸ್ಥಳ ಯಾವುದು?

ಸಿ) ಅಂಬೇಡ್ಕರ್ ಅವರ ಪಾಲನೆ ಪೋಷಣೆಯನ್ನು ಮೀರಾಬಾಯಿವರು ಏಕೆ ಮಾಡಿದರು?

ಡಿ) ಅಂಬೇಡ್ಕರ್ ಅವರನ್ನು ಸಂವಿಧಾನ ಶಿಲ್ಪಿ ಎಂದು ಏಕೆ ಕರೆದಿದ್ದಾರೆ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1 x 4 = 4**

37. ಅಂತರ್ಜಾಲಾಧಾರಿತ ಪಾಠಗಳ ಉಪಯೋಗ.

ಅಥವಾ

ಸಮಾಜಿಕ ಪಿಡುಗುಗಳು

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.**

**1 x 5 = 5**

38. ನಿಮ್ಮನ್ನು ಯಲ್ಲಾಪುರದ ಸರ್ಕಾರಿ ಪ್ರೌಢಶಾಲೆಯ 'ತೇಜಸ್' ಎಂದು ಭಾವಿಸಿಕೊಂಡು ವ್ಯಾಸಂಗ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಉಡುಪಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಸೌಜನ್ಯ' ಎಂದು ಭಾವಿಸಿಕೊಂಡು ಸಾಗರದಲ್ಲಿ ಇರುವ ನಿಮ್ಮ ತಂದೆ ಮೋಹನ್ ಅವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ ಒಂದು ಪತ್ರ ಬರೆಯಿರಿ.